
ಹಂಪಿ ಉತ್ಸವದಲ್ಲಿ ಕಲಾತಂಡಗಳ ಸಂಭ್ರಮ

ಕಲ್ಲು ಕಲ್ಲಿನಲ್ಲಿ ಹಂಪಿಯ ಪಿಸುನುಡಿ

# ಗತವೈಭವದ ಮೆಲುಕಿಗೆ ಹಂಪಿ ಉತ್ಸವ

**ಹಂಪಿ ಎಂದೊಡನೆ ಕಣ್ಣ ಮುಂದೆ ಬರುವುದು ಬಂಡೆಗಳು, ಸ್ಮಾರಕಗಳು. ಅವುಗಳನ್ನು ನೋಡುತ್ತ ನೋಡುತ್ತ ಕಾಲುಗಳು ಸುಸ್ತಾಗಬಹುದೇ ಹೊರತು ಕಣ್ಣುಗಳಲ್ಲ. ಇಂತಹ ಸ್ಮಾರಕಗಳ ಸುತ್ತಲೇ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವರ್ಣರಂಜಿತ ಕಲಾಲೋಕವನ್ನು 'ಹಂಪಿ ಉತ್ಸವ'ದಲ್ಲಿ ಕಣ್ತುಂಬಿಕೊಳ್ಳಲು ಲಕ್ಷಾಂತರ ಮನಸ್ಸುಗಳು ಕಾತರಿಸುತ್ತಿವೆ.**



**■ ಎಂ.ಜಿ. ಬಾಲಕೃಷ್ಣ**

ಏಳು ಶತಮಾನಗಳ ಹಿಂದೆ ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರುಗಳಾಗಿದ್ದ ವಿದ್ಯಾರಣ್ಯರ ಪ್ರೇರಣೆಯಿಂದ ಹಕ್ಕ ಬುಕ್ಕರು ಸ್ಥಾಪಿಸಿದ ವಿಜಯನಗರ ಸಾಮ್ರಾಜ್ಯ ಭಾರತ ಮಾತ್ರವಲ್ಲ, ಇಡೀ ಜಗತ್ತೇ ಬೆರಗಾಗಿ ನೋಡಿದಂತಹ ಶ್ರೀಮಂತಿಕೆಯ ತಾಣವಾಗಿತ್ತು, ಅಂತಹ ವೈಭವದ ಸಾಮ್ರಾಜ್ಯದ ರಾಜಧಾನಿಯೇ ಹಂಪಿ. ಕ್ರಿ.ಶ.1336ರಿಂದ 1680ರವರೆಗೆ ಅನೇಕ ಅರಸರು ಇಲ್ಲಿನ ನೆಲಜಲ, ಕಲೆ, ಸಂಸ್ಕೃತಿಯನ್ನು ಪೋಷಿಸುತ್ತ, ವೈಭವದಿಂದ ಮೆರೆದ ಕುರುಹುಗಳು ಸಿಗುವುದು ಅಳಿದುಳಿದ ಸ್ಮಾರಕಗಳ ಮೂಲಕ. ಸುಮಾರು 42 ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿ ಹರಡಿಕೊಂಡಿರುವ ಸ್ಮಾರಕಗಳಿಂದಾಗಿಯೇ ಇಲ್ಲಿಗೆ ಬಯಲು ವಸ್ತುಸಂಗ್ರಹಾಲಯ ಎಂಬ ಹೆಸರೂ ಬಂದಿದೆ. ಬಂಡೆಗಳ ಸಹಜ ಸೌಂದರ್ಯ, ನಡುವೆ ಹರಿಯುತ್ತಿರುವ ತುಂಗಭದ್ರೆಯ ವಯ್ಯಾರದಲ್ಲಿ ಇತಿಹಾಸ ಅಚ್ಚಳಿಯದೆ ಉಳಿದಿದೆ. ಅವುಗಳ ಮೆಲುಕು ಹಾಕಲು ಬಂದಿದೆ ಮತ್ತೊಂದು 'ಹಂಪಿ ಉತ್ಸವ'.

ಮಾಜಿ ಉಪಮುಖ್ಯಮಂತ್ರಿ ದಿವಂಗತ ಎಂ.ಪಿ.ಪ್ರಕಾಶ್ ಅವರ ವಿಶೇಷ ಆಸಕ್ತಿಯಿಂದ ಆರಂಭವಾದ ಹಂಪಿ ಉತ್ಸವಕ್ಕೆ 39 ವರ್ಷದ ಇತಿಹಾಸವಿದೆ. ಈ ನಡುವೆ 10 ವರ್ಷ ವಿವಿಧ ಕಾರಣಗಳಿಂದ ಉತ್ಸವ ನಡೆದಿಲ್ಲ. ಹೀಗಾಗಿ